**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 924/2018**

ಫ್ರಾಸಾ – 3

ಚಾಸಾ – 3

**ಸಾಕ್ಷಿಯು ದಿಃ 12.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಮಾದಶೆಟ್ಟಿ |
| ತಂದೆಯ ಹೆಸರು | : | ನಿಂಗಶೆಟ್ಟಿ |
| ವಯಸ್ಸು | : | 56 ವರ್ಷ |
| ವೃತ್ತಿ | : | ಕೂಲಿ |
| ವಾಸಸ್ಥಳ | : | ಬಸವಪುರಗ್ರಾಮ |

**ದಂಡ ಪ್ರಕ್ರೀಯಾ ಸಂಹಿತೆ ಕಲಂ 299 ರ ರೀತ್ಯಾ ಮುಖ್ಯ ವಿಚಾರಣೆಃ**

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ಗೊತ್ತು. ಚಾಸಾ 2 ನನಗೆ ಗೊತ್ತಿಲ್ಲ. ಆರೋಪಿಗಳು ನನಗೆ ಗೊತ್ತಿಲ್ಲ ಮತ್ತು ನಾನು ಈ ಹಿಂದೆ ಅವರನ್ನು ನೋಡಿಲ್ಲ. ಈ ಪ್ರಕರಣದ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ತಾನೂ ಎಂದಿನಂತೆ ಚಾಸಾ 1 ರವರು ನೋಡಿಕೊಳ್ಳುತ್ತಿರುವ ಪ್ರಸಾದ್ ರವರ ಜಮೀನಿಗೆ ಕೂಲಿ ಕೆಲಕ್ಕೆ ಹೋದಾಗ ಚಾಸಾ 1 ರವರು ರಾತ್ರಿ ಯಾರೋ ಕಳ್ಳರು ಹೊಸಮನೆಯ ಬಲ ಭಾಗದ ಕಬ್ಬಿಣದ ಬಾಗಿಲು, ಮರದ ಬಾಗಿಲುಗಳನ್ನು ಬೀಗ ಒಡೆದು ಒಳಗೆ ಹೋಗಿ ರೂಮ್ ನ ಬಾಗಿಲಗಳನ್ನು ಒಡೆದು ಕೇಬಲ್ ವೈರ್, ಟೇಬಲ್ ಫ್ಯಾನ್ , ಸ್ಟ್ಯಾಂಡ್ ಫ್ಯಾನ್, ಅಡುಗೆ ಮನೆಯಲ್ಲಿಟ್ಟಿದ್ದ ಮಿಕ್ಸಿ, ಸ್ಟೆಬಲ್ಯಾಜರ್, ಗಾಜಿನ ತಟ್ಟೆಗಳನ್ನು ಲೋಟಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿಸಿದ್ದು ನಂತರ ನಾನು ಹೋಗಿ ನೋಡಲಾಗಿ ಆ ರೀತಿ ಆಗಿರುವುದು ಕಂಡುಬಂದಿರುತ್ತದೆ ಮತ್ತು ರಾತ್ರಿ ಯಾರೋ ಕಳ್ಳತನ ಮಾಡಿರುವುದು ನಿಜವಾಗಿರುತ್ತದೆ, ನಾನು ಮತ್ತು ಚಾಸಾ 1 ರವರು ಎಲ್ಲ ಕಡೆ ಹುಡುಕಿದರು ವಸ್ತುಗಳು ಪತ್ತೆಯಾಗಿರುವುದಿಲ್ಲ, ನಂತರ ಚಾಸಾ 1 ರವರು ದೂರು ನೀಡಿರುವ ವಿಚಾರ ನನಗೆ ತಿಳಿಯಿತು ಮತ್ತು ಈ ಬಗ್ಗೆ ಮೇಲೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ನೀರಾಕರಿಸಿದ್ದರಿಂದ ಅದನ್ನು ನಿಪಿ 10 ಎಂದು ಗುರ್ತಿಸಲಾಯಿತು. ನಿಪಿ 10 ರಲ್ಲಿರುವ ವಿಚಾರಗಳು ಗೊತ್ತಿದದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :– ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ